# ಮಾನವೀಯತೆಯ ದೃಢತೆಗೆ ಬೀಜಮಂತ್ರ


**ಅಮೆರಿಕದ** ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ತನ್ನ ಮಗನ ಗುರುಗಳಿಗೆ ಬರೆದ ಒಂದು ಪತ್ರ, ಮೈಸೂರು ರಂಗಾಯಣದ ಎಸ್. ರಾಮನಾಥ ಅವರಿಂದ ಪದ್ಯರೂಪಿ ರಚನೆಯಾಗಿ 'ಕಲಿಸು ಗುರುವೇ' ಹೆಸರಿನಲ್ಲಿ ಕನ್ನಡದ ಮನಸ್ಸಿಗೆ ತಾಕಿದೆ. ಮಗು ತನ್ನ ಗುರುವನ್ನು ಪ್ರಾರ್ಥಿಸುವ ಈ ರೂಪ, ಕುವೆಂಪು ಅವರ 'ಬೆರಳ್‌ಗೆ ಕೊರಳ್' ನಾಟಕದ ಏಕಲವ್ಯನ 'ಆತ್ಮತಮೋಹಾರಿ' ಬೇಡಿಕೆಯಂತಿದೆ.

ಮಗು ಮನುಷ್ಯ 'ಆಗ'ಬೇಕು. ಅದೊಂದು ಸತತ ಶ್ರಮದ, ಎಚ್ಚರದ ಪ್ರಕ್ರಿಯೆ. ವ್ಯಕ್ತಿಯಿಂದ ವ್ಯಕ್ತಿತ್ವ ಹೊಮ್ಮುವುದು ಅನುಕ್ಷಣದ ಚರಿತ್ರೆ. ಇದೊಂದು ಸ್ವ–ಶೋಧದ ದಾರಿ. ಈ ದಾರಿಯಲ್ಲಿ ಮಗು ಆಧರಿಸುವುದು ಗುರುವನ್ನು; ಮಗು ಪಡೆವ ಮೊದಲ ಮಾನವೀಯ ಸಂಬಂಧದ ಸ್ಪರ್ಶವದು. ರಕ್ತ–ಜಾತಿ–ಧರ್ಮ, ಈ ಇಂತಹ ಹಲವು ಅಬದ್ಧಗಳಿಂದ ಮಗುವನ್ನು ಮೇಲೆತ್ತುವ ಬಯಲ ಗಾಳಿಯದು. ಅದೊಂದು ಅನೂಹ್ಯ ಆಪ್ತತೆ; ಮಗುವಿನ ವ್ಯಕ್ತಿತ್ವದ ಪದರರೂಪೀ ಸಂರಚನೆಯು ರೂಪುಗೊಳ್ಳುವ ತಾಣ. ಈ ಪದ್ಯದಲ್ಲಿ ತನಗೇನು ಬೇಕಿದೆ ಎಂದು ಮಗು ಕೇಳುತ್ತಿದೆ. ನಿರ್ಧರಿಸಿದೆ. ಪಡೆಯಲು ಸಿದ್ಧವಾಗಿದೆ. ಪಡೆವ ತಾಣವಿಲ್ಲದೆ, ಕೊಡುವ ತ್ರಾಣ ಮಿತವಾದದ್ದು, ನಿಷ್ಫಲವಾದದ್ದು. 'ಧೀಃ ಯೊ ಯೊ ನಃ ಪ್ರಚೋದಯಾತ್' ಎಂಬ ಬೇಡಿಕೆ ಮಾತ್ರ ಧೀಃ ಶಕ್ತಿಯನ್ನು ಉದ್ದೀಪಿಸಬಲ್ಲದು.

ಪದ್ಯ ಸರಳವಾಗಿ ಗುರು–ಶಿಷ್ಯ ಸಂಬಂಧದ ಆತ್ಮಸಾತತ್ಯವನ್ನು ಕಾಣಿಸುತ್ತದೆ. ಇದು ಇರಬೇಕಾದ ಆದರ್ಶ. ಇರುವ ವಾಸ್ತವ ಬೇರೆ. ವಾಸ್ತವಕ್ಕೆ ಕವಿದ ಕತ್ತಲು ಕಾಲಾತೀತವಾಗಿದೆ. ಶಿಕ್ಷಣ ಉದ್ಯಮವಾಗಿ, ಶಿಕ್ಷಕತನ ವೃತ್ತಿಯಾಗಿ, ಬಯೊಮೆಟ್ರಿಕ್ ಯಂತ್ರ – ಅಧಿಕಾರಶಾಹಿ ಅಂಕುಶದ ಆಡಳಿತವಾಗಿ ಬದಲಾದ ವ್ಯವಸ್ಥೆಯಲ್ಲಿ ಗುರು–ಶಿಷ್ಯ ಸಂಬಂಧದ ಪ್ರಾಂಜಲ ಸ್ಥಿತಿ ಮರೆಯಾಗುತ್ತದೆ. ಜಾಣ್ಮೆ ಅಂಕಗಳಿಕೆಯಾಗಿದೆ. ಸುಳ್ಳು, ಸ್ವಾರ್ಥ, ಹೇಡಿತನ, ದುಷ್ಟತನಗಳು ಸಮಾಜದ ಸಹಜತೆಯಾಗಿದೆ. ಸತ್ಯ–ನಿಸ್ವಾರ್ಥಗಳ ಅರ್ಥವೂ ಆಗದ ಮಂಕು ಕವಿದಿದೆ. ವಿಜೃಂಭಿಸುತ್ತಿರುವ ಕೆಡುಕಿನ ಕಟ್ಟಕಡೆಯ ಗೆಲುವೆಂದರೆ, ನಮ್ಮ ಮನಃಸ್ಥಿತಿಯನ್ನು ತನಗೆ ಒಗ್ಗಿಸಿಕೊಳ್ಳುವುದು. ಕೆಡುಕು ದಾಳಿ ಮಾಡುತ್ತ ಒಳಗಿಳಿಯುತ್ತ ವ್ಯಾಪಿಸಿಕೊಳ್ಳುತ್ತದೆ.

ಸಮಾಜ ದುರಂತದೆಡೆ ಜರುಗುವಾಗ, ವ್ಯಕ್ತಿತ್ವವನ್ನು ಸದೃಢವಾಗಿಸಿಕೊಂಡಾಗ ಮಾತ್ರ ಅತ್ತ ಕಡೆ ಜರುಗದ ಬಂಡೆಗಲ್ಲಾಗಬೇಕು. ತಾ ನಿಲ್ಲಬೇಕು. ತನ್ನ ಸುತ್ತಲನ್ನು ನಿಲ್ಲಿಸಬೇಕು. ಕಡಿಮೆ ದುಡಿಮೆ, ಹೆಚ್ಚು ಲಾಭವೇ ಜಾಣ್ಮೆಯಾಗಿರುವ ಭ್ರಷ್ಟ ಕಾಲದಲ್ಲಿ ಬೆವರಿನ ರುಚಿ ಕಲಿಸುವ, ಆಷಾಢಭೂತಿತನದಿಂದ ಸಮಚಿತ್ತದ ಮಹತಿಗೆ, ದ್ವೇಷದ ಉರಿಯಿಂದ ಸ್ನೇಹದ ಶಾಂತಿಗೆ, ಪ್ರಕೃತಿಯೊಂದಿಗೆ ಒಂದಾಗಿ ಬಾಳುವ ಅಗತ್ಯಕ್ಕೆ, ಅಪರಿಮಿತ ಆತ್ಮವಿಶ್ವಾಸ ಮತ್ತು ನಿಷ್ಠುರ ಆತ್ಮಾವಲೋಕನಕ್ಕೆ, ತನ್ನಂತೆಯೇ ಇತರರೂ ಎಂದು ತಿಳಿವ ಮಾನವೀಯತೆಯ ದೃಢತೆಗೆ ವ್ಯಕ್ತಿತ್ವವನ್ನು ರೂಪುಗೊಳಿಸಬೇಕೆಂಬ ಹಂಬಲದ ಪ್ರಾರ್ಥನೆಯಿದು.

ಮಾನವೀಯತೆ ಎನ್ನುವುದು ಅಮೂರ್ತವಲ್ಲ, ಅದೊಂದು ಬೆಳವಣಿಗೆಯ ಪಥ. ಸುತ್ತಲ ಸಮಾಜ ದ್ವೇಷ–ಹಿಂಸೆ–ಆರ್ಭಟಗಳಿಂದ ಉಸಿರುಗಟ್ಟುತ್ತಿರುವಾಗ, ಅದರಿಂದ ಪಾರಾಗುವ, ಪಾರುಗಾಣಿಸುವ ಬೀಜಮಂತ್ರವನ್ನು ಪದ್ಯ ನುಡಿಸುತ್ತಿದೆ. ದೇಶ–ಕಾಲದ ಹಂಗು ಹರಿದು, ಈ ಸಾಲುಗಳು ನಮ್ಮೊಂದಿಗೆ, ನಮ್ಮ ಜರೂರುಗಳೊಂದಿಗೆ ಮಾತನಾಡುತ್ತಿವೆ.



**–ವಿನಯಾ ಒಕ್ಕುಂದ**